# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
## ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೇ, ಬೆಂಗಳೂರು-560 065

### ಟೆಂಡರ್ ಅಧಿಸೂಚನೆ ಸಂಖ್ಯೆ:
### NO.EO/MAIN CANTEEN/BOTANICAL GARDEN CANTEEN/SHOPS/GKVK/ 2024-25, DATED: 10-07-2024

ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸುಮಾರು 2000 ವಿದ್ಯಾರ್ಥಿಗಳು ಮತ್ತು ಸಿಬ್ಬಂಧಿಗಳಿಗೆ ಉಪಹಾರ / ಆಹಾರವನ್ನು (ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸುವ ಷರತ್ತಿಗೊಳಪಟ್ಟು 02 ವರ್ಷಗಳ ಅವಧಿಗೆ) ಪೂರೈಕೆ ಮಾಡಲು ಕಾರ್ಮಿಕ ಕಾಯ್ದೆಯಡಿಯಲ್ಲಿ ನೋಂದಾಯಿತ ನುರಿತ ಕ್ಯಾಟರರ್ಸ್ / ಹೋಟೆಲ್ ಉದ್ಯಮಿಗಳಿಂದ ದ್ವಿ-ಲಕೋಟೆಯಲ್ಲಿ ತಾಂತ್ರಿಕ ಮತ್ತು ಹಣಕಾಸಿನ ಬಿಡ್ದುಗಳನ್ನು ಆಹ್ವಾನಿಸಲಾಗಿದೆ. ಸಸ್ಯಹಾರಿ ಮುಖ್ಯ ಉಪಹಾರ ಮಂದಿರ, ಸಸ್ಯ ಉದ್ಯಾನವನ ಬಳಿಯ ಉಪಹಾರ ಮಂದಿರ ಹಾಗೂ ಅಂಗಡಿ ಮಳಿಗೆಗಳು – (1) ಕಂಪ್ಯೂಟರ್ ಮಾರಾಟ ಮತ್ತು ಸೇವೆಗಳು ಮಳಿಗೆ-1, (2) ಸ್ಟೇಷನರಿ ಮಳಿಗೆ -1, (3) ಛಾಯಾ ಪ್ರತಿ, ಬೆರಳಚ್ಚು ಮಳಿಗೆ-1, (4) ಐಸ್ ಕ್ರೀಂ / ಜ್ಯೂಸ್ ಮತ್ತು ತಿಂಡಿಗಳ ಮಳಿಗೆ-1, (5) ಡೈರಿ/ಬೇಕರಿ ಉತ್ಪನ್ನಗಳ ಮಳಿಗೆ-1.

ಟೆಂಡರ್‌ದಾರರು ತಾಂತ್ರಿಕ ಮತ್ತು ಹಣಕಾಸಿನ ಬಿಡ್ದುಗಳನ್ನು ಪ್ರತ್ಯೇಕ ಲಕೋಟೆಯಲ್ಲಿ ಸಲ್ಲಿಸಬೇಕಾಗಿರುತ್ತದೆ.

**<u>ಷೆಡ್ಯೂಲ್ ವಿವರ</u>**

| | | |
|---|---|---|
| 1) | ಟೆಂಡರ್ ಫಾರಂ ಪಡೆಯಲು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ. | 26-07-2024 ಅಪರಾಹ್ನ 12.30 ಗಂಟೆಯವರೆಗೆ |
| 2) | ಖಾಲಿ ಟೆಂಡರ್ ಫಾರಂ ನೀಡುವ ಪ್ರಾರಂಭಿಕ ದಿನಾಂಕ. | 18-07-2024 ಪೂರ್ವಾಹ್ನ 9.00 ಗಂಟೆಯಿಂದ |
| 3) | ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ. | 26-07-2024 ಅಪರಾಹ್ನ 2.00 ಗಂಟೆಯವರೆಗೆ |
| 4) | ತಾಂತ್ರಿಕ ಬಿಡ್ದುಗಳನ್ನು ಮತ್ತು ಹಣಕಾಸಿನ ಬಿಡ್ದುಗಳನ್ನು ತೆರೆಯುವ ದಿನಾಂಕ. | 26-07-2024 ಅಪರಾಹ್ನ 3.00 ಗಂಟೆಗೆ |

**<u>I. ಸಸ್ಯಹಾರಿ ಮುಖ್ಯ ಉಪಹಾರ ಮಂದಿರ, ಸಸ್ಯ ಉದ್ಯಾನವನ ಬಳಿಯ ಉಪಹಾರ ಮಂದಿರ:</u>**

ಆಸಕ್ತಿಯುಳ್ಳ ಟೆಂಡರ್‌ದಾರರು ತಾಂತ್ರಿಕ ಬಿಡ್ಡಿನಲ್ಲಿ 1) ಸಂಸ್ಥೆಯ ನೋಂದಾವಣೆ ಪ್ರಮಾಣ ಪತ್ರ, 2) ಅನುಭವದ ಪ್ರಮಾಣ ಪತ್ರ, 3) ಕೆಲಸ ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲಗಳ ವಿವರ. 4) ರೂ.2,00,000/- ಗಳಿಗೆ ಸಾಲ್ವೆನ್ಸಿ ಪ್ರಮಾಣ ಪತ್ರ, 5) ಹಾಲಿ ಕಾರ್ಯನಿರ್ವಹಿಸುತ್ತಿರುವ ಹೋಟೆಲ್‌ಗಳ ಛಾಯಚಿತ್ರಗಳು. 6) ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಪ್ರಮಾಣ ಪತ್ರ (FSSAI), 7) ಕಾರ್ಮಿಕರ ನೋಂದಾವಣೆ ಪ್ರಮಾಣ ಪತ್ರ ESI/PF ಮತ್ತು ESI ಹಾಗೂ PF ಪಾವತಿಸಿರುವ ಚಲನ್‌ಗಳ ಪ್ರತಿಗಳು, 8) ನೂತನವಾಗಿ ನವೀಕರಿಸಿರುವ ಪ್ರಮಾಣ ಪತ್ರ (FSSAI Renewal Certificate), 9) ಕನಿಷ್ಠ 3 ವರ್ಷದ ಆದಾಯ ತೆರಿಗೆ ಪಾವತಿಸಿರುವ ದಾಖಲೆಗಳು, 10) ಜಿಎಸ್‌ಟಿ ಪ್ರಮಾಣ ಪತ್ರ, 11) ಭದ್ರತಾ ಠೇವಣಿಯಾಗಿ ರೂ.1,00,000/- ಗಳನ್ನು ಡಿಡಿ ಮುಖಾಂತರ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಗಾಕೃವಿಕೇ, ಬೆಂಗಳೂರು-65 ಇವರ ಹೆಸರಿಗೆ ಸಲ್ಲಿಸುವುದು. ಖಾಲಿ ಟೆಂಡರ್ ಫಾರಂನ ಬೆಲೆ ರೂ.2,000/-. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ. ಉಪಹಾರ ಮಂದಿರದ ಮೇಲ್ವಿಚಾರಣಾ ಸಮಿತಿಯ ಸಭೆಯು ತಾಂತ್ರಿಕ ಬಿಡ್ದುಗಳನ್ನು ಪರಿಶೀಲಿಸಿ, ತಾಂತ್ರಿಕ ಬಿಡ್ಡಿನಲ್ಲಿ ತೇರ್ಗಡೆ ಹೊಂದಿರುವ ಟೆಂಡರ್‌ದಾರರನ್ನು ಆಯ್ಕೆ ಮಾಡಲಾಗುತ್ತದೆ.

ಮು.ಪು.ನೋ.

**II. ಅಂಗಡಿ ಮಳಿಗೆಗಳು:**

ಅನುಭವದ ಪ್ರಮಾಣ ಪತ್ರ ಹಾಗೂ ಸಕ್ಷಮ ಪ್ರಾಧಿಕಾರವು ನೀಡಿರುವ ರಹದಾರಿ ಪತ್ರದ ಪ್ರತಿಯೊಂದಿಗೆ ನಿಗದಿತ ಅಂಗಡಿ ಮಳಿಗೆಗೆ ಅರ್ಜಿ ನೀಡಬೇಕು ಹಾಗೂ ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅರ್ಜಿಯೊಂದಿಗೆ ಖಾಲಿ ಟೆಂಡರ್ ಫಾರಂನ ಬೆಲೆ ರೂ.1,000=00 ಗಳ ಡಿಡಿಯನ್ನು "ಹಣಕಾಸುನಿಯಂತ್ರಣಾಧಿಕಾರಿಗಳು, ಕೃವಿವಿ, ಗಾಕೃವಿಕೇ, ಬೆಂಗಳೂರು–65" ಇವರ ಹೆಸರಿಗೆ ಪಡೆದು ಸಲ್ಲಿಸುವುದು. ಬೇರೆ ಬೇರೆ ಮಳಿಗೆಗಳಿಗೆ ಪ್ರತ್ಯೇಕವಾದ ಅರ್ಜಿಗಳನ್ನು ಪಡೆಯಬೇಕಾಗಿರುತ್ತದೆ. **ರೂ.50,000=00** ಗಳನ್ನು ಮುಂಗಡ ಭದ್ರತಾ ಠೇವಣಿಯಾಗಿ ಟೆಂಡರ್ ಫಾರಂ ಜೊತೆ ಸಲ್ಲಿಸಬೇಕಾಗಿರುತ್ತದೆ. ಮುಂಗಡ ಭದ್ರತಾ ಹಣವನ್ನು ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಬೆಂಗಳೂರು, ಇವರ ಹೆಸರಿಗೆ ಪಡೆದು ಟೆಂಡರ್ ಫಾರಂ ಜೊತೆ ಲಗತ್ತಿಸುವುದು. ಅಂಗಡಿ ಮಳಿಗೆಗಳ ಹಂಚಿಕೆಯ ನಿಯಮಗಳು ಮತ್ತು ಕರಾರಿನ ನಿಯಮಗಳನ್ನು ಟೆಂಡರ್ ಫಾರಂ ಜೊತೆಯಲ್ಲಿ ಪಡೆಯಬಹುದು.

**ವಿಶೇಷ ಸೂಚನೆ:** ಖಾದ್ಯಗಳ ದರಪಟ್ಟಿಯನ್ನು ಟೆಂಡರ್ ಫಾರಂನ ಜೊತೆ ನಮೂದಿಸಿ ಪ್ರತ್ಯೇಕ ಲಕೋಟೆಯಲ್ಲಿ ಸಲ್ಲಿಸಬೇಕಾಗುತ್ತದೆ.

ಆಸ್ತಿ ಅಧಿಕಾರಿಗಳು

ಆಸ್ತಿ ಅಧಿಕಾರಿಗಳು
ಕೃಷಿ ವಿಶ್ವವಿದ್ಯಾನಿಲಯ
ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಬೆಂಗಳೂರು–560 065